ಭಾವವನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ.

**◆ ನೀವು ಸಿನಿಮಾ ಆಯ್ದುಕೊಳ್ಳುವ ಮಾನದಂಡಗಳು ಬದಲಾಗಿವೆಯೇ?**

ಖಂಡಿತ ಬದಲಾಗಿವೆ. ಮೊದಲೆಲ್ಲ ದೊಡ್ಡ ಸಿನಿಮಾಗಳನ್ನು ಮಾಡಬೇಕು. ದೊಡ್ಡ ಟೀಂ ಇರಬೇಕು ಎಂಬ ಆಸೆ ಇರ್ತಿತ್ತು. ಈಗ ಚೆನ್ನಾಗಿರೋ ಸಿನಿಮಾ ಮಾಡಬೇಕು; ಚೆನ್ನಾಗಿರೋ ಟೀಂ ಇರ್ಬೇಕು ಅನಿಸುತ್ತಿದೆ. ಚೆನ್ನಾಗಿರುವ ಸಿನಿಮಾವೇ ದೊಡ್ಡ ಸಿನಿಮಾ ಅನಿಸುತ್ತದೆ. ಪಾತ್ರದ ಲೆಂಥ್‌ಗಿಂತ ಸ್ಟ್ರೆಂಥ್ ಮುಖ್ಯ ಅನಿಸುತ್ತಿದೆ. ಬರೀ ದೊಡ್ಡ ಸಿನಿಮಾ ಮಾಡಬೇಕು ಎಂದು ಅಂದುಕೊಂಡು ಸಿನಿಮಾ ಒಪ್ಪಿಕೊಂಡರೆ ನನ್ನೊಳಗಿನ ಕಲಾವಿದೆಗೆ ತೃಪ್ತಿ ಇರುವುದಿಲ್ಲ. ಕಥೆ, ತಂಡ ಮತ್ತು ಪಾತ್ರ ಈ ಮೂರು ಅಂಶಗಳನ್ನು ನೋಡಿ ನಾನೀಗ ಸಿನಿಮಾ ಆಯ್ದುಕೊಳ್ಳುತ್ತೇನೆ.

**◆ ನೀವು ನಿರ್ವಹಿಸಿದ ಪಾತ್ರಗಳಿಂದ ನಿಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಹೇಗಾದರೂ ಸಹಾಯ ಆಗಿವೆಯೇ?**

ಪ್ರತಿ ಪಾತ್ರದಲ್ಲಿಯೂ ನಾನು ಕಲಿಯುವಂಥದ್ದು ತುಂಬ ಇರುತ್ತದೆ. ನಾವು ಎಂಥ ಪಾತ್ರಗಳನ್ನು ಆಯ್ದುಕೊಳ್ಳುತ್ತೇವೆ ಮತ್ತು ಅವುಗಳನ್ನು ಹೇಗೆ ಗ್ರಹಿಸುತ್ತೇವೆ ಎನ್ನುವುದರ ಮೇಲೆ ಅದು ಅವಲಂಬಿತ ಆಗಿರುತ್ತದೆ. ಪಾತ್ರದಲ್ಲಿ ನಾನು ಅಭಿವ್ಯಕ್ತಿಸುವ ಎಲ್ಲ ಭಾವಗಳೂ ನನ್ನೊಳಗಿಂದಲೇ ಬಂದಿರುತ್ತವಲ್ಲವೇ? ನಾನು ಸ್ವಭಾವತಃ ತುಂಬ ಭಾವುಕಳು. ಅಂಥ ಪಾತ್ರಗಳನ್ನು ಚೆನ್ನಾಗಿ ಮಾಡ್ತೀನಿ. ಆದರೆ ಅದನ್ನು ಬಿಟ್ಟು ಬೇರೆ ಬಗೆಯ ಪಾತ್ರಗಳನ್ನು ಮಾಡುವಾಗ ಆ ಪಾತ್ರಗಳಿಂದ ನಾನು ಹೊಸ ಬಗೆಯ ಭಾವಗಳನ್ನು, ಅಭಿವ್ಯಕ್ತಿ ಕ್ರಮಗಳನ್ನು ಕಲಿತುಕೊಳ್ಳುತ್ತಿರುತ್ತೇನೆ. ಅದು ನನ್ನ ವ್ಯಕ್ತಿತ್ವದ ಮೇಲೆಯೂ ಖಂಡಿತ ಪ್ರಭಾವ ಬೀರುತ್ತದೆ.

**◆ ನೀವೊಬ್ಬ ಸೆಲೆಬ್ರಿಟಿ. ಜನಪ್ರಿಯತೆ, ಜನರ ಅಭಿಮಾನ ಸಿಗುತ್ತಿದೆ. ಇದು ಎಂದಾದರೂ ನಿಮಗೆ ಬಂಧನ ಅನಿಸಿದ್ದಿದೆಯೇ?**

ಸೆಲೆಬ್ರಿಟಿ ಆಗುವುದು ಖಂಡಿತ ಖುಷಿಯ ವಿಷಯವೇ. ಅದನ್ನು ಎಂಜಾಯ್ ಮಾಡ್ತೀನಿ ನಾನು. ಆದರೆ ಇಪ್ಪತ್ನಾಲ್ಕು ಗಂಟೆಯೂ ಸೆಲೆಬ್ರಿಟಿ ಆಗಿರುವುದು ಕಷ್ಟ. ಎಂಥ ಸೆಲೆಬ್ರಿಟಿಗೂ ಒಂದು ವೈಯಕ್ತಿಕ ಜೀವನ ಇರುತ್ತದೆ. ಆದರೆ ಈ ವಿಷಯದಲ್ಲಿ ನಾನು ಅದೃಷ್ಟವಂತೆ. ಯಾಕೆಂದರೆ ನಾನು ಇರುವುದು ಮುಂಬೈನಲ್ಲಿ, ನಟಿಸುತ್ತಿರುವುದು ಕನ್ನಡ ಸಿನಿಮಾಗಳಲ್ಲಿ. ಅಂದರೆ ಬೆಂಗಳೂರಿನಲ್ಲಿ ನಾನು ಸೆಲೆಬ್ರಿಟಿಯಾಗಿರುತ್ತೇನೆ. ಆದರೆ ಮುಂಬೈನಲ್ಲಿ ನಾನು ಸಾಮಾನ್ಯ ಹುಡುಗಿ. ನನ್ನನ್ನು ಜನರು ಅಷ್ಟಾಗಿ ಗುರ್ತಿಸುವುದಿಲ್ಲ. ಹಾಗಾಗಿ ಸಾಮಾನ್ಯಳ ಹಾಗೆ ರಸ್ತೆಯಲ್ಲಿ ಅಡ್ಡಾಡಲು ಸಾಧ್ಯ. ಇದು ಬೆಂಗಳೂರಿನಲ್ಲಿ ಸಾಧ್ಯವಿಲ್ಲ. ■

# ಬೆಳವಾಡಿ ಚಿತ್ರದಲ್ಲಿ ರಾಗಿಣಿ

ರಾಗಿಣಿ ದ್ವಿವೇದಿ ಪಡ್ಡೆ ಹುಡುಗರ ಮೈಬೆಚ್ಚಗಾಗಿಸುವ ದೃಶ್ಯಗಳಿಂದಲೇ ಸುದ್ದಿಯಾದವರು. ನಂತರ ಹಲವು ಡಿ ಗ್ಲಾಮರ್ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ ಇಂದಿಗೂ ರಾಗಿಣಿ ಎಂದರೆ ನೆನಪಾಗುವುದು ಅವರ ಮೈಸಿರಿ ಪ್ರದರ್ಶನದ 'ತುಪ್ಪ ಬೇಕಾ ತುಪ್ಪ' ಹಾಡೇ. ತುಪ್ಪದ ಹುಡುಗಿ ನಂತರ ಕ್ರಾಶ್ ಡಯಟ್ ಮೂಲಕ ಮೈಯಿಳಿಸಿಕೊಂಡು ಅಯ್ಯೋ ಪಾಪ ಅನಿಸುವ ಮಟ್ಟಿಗೆ ಸೊರಗಿಹೋಗಿದ್ದು ಮತ್ತೊಂದೇ ಕಥೆ. ಬರೀ ದೇಹದ ಮೇಲಷ್ಟೇ ಅಲ್ಲ, ವೃತ್ತಿಜೀವನದಲ್ಲಿಯೂ ಅವರು ಕೆಲವು ಪ್ರಯೋಗಗಳನ್ನು ನಂತರದ ದಿನಗಳಲ್ಲಿ ಮಾಡಿದರು. 'ಕಿಚ್ಚು' ಎಂಬ ಚಿತ್ರದಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಶೋಷಿತ ಹುಡುಗಿಯಾಗಿ, 'ಟೆರರಿಸ್ಟ್' ಚಿತ್ರದಲ್ಲಿ ಮುಗ್ಧ ಮಹಿಳೆಯಾಗಿ, ತಮ್ಮದೇ ಹೆಸರಿನ ಸಿನಿಮಾದಲ್ಲಿ ಆ್ಯಕ್ಷನ್ ಕ್ವೀನ್ ಆಗಿ ಕಾಣಿಸಿಕೊಂಡರು.

ಇದೀಗ ರಾಗಿಣಿ ಇನ್ನೊಂದು ಪ್ರಯೋಗಕ್ಕೆ ಸಜ್ಜಾಗಿದ್ದಾರೆ. ಈ ಪ್ರಯೋಗದ ಕುರಿತು ಒಂದಿಷ್ಟು ನಿರೀಕ್ಷೆ ಹುಟ್ಟಲು ಕಾರಣಗಳಿವೆ. ಖ್ಯಾತ ರಂಗ ನಿರ್ದೇಶಕ, ನಟ ಪ್ರಕಾಶ್ ಬೆಳವಾಡಿ ಅವರ ನಿರ್ದೇಶನದ ಹೊಸ ಚಿತ್ರದಲ್ಲಿ ರಾಗಿಣಿ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ.

'ಅಧ್ಯಕ್ಷ ಇನ್ ಅಮೆರಿಕ' ಸಿನಿಮಾದಲ್ಲಿ ರಾಗಿಣಿ ಮತ್ತು ಪ್ರಕಾಶ್ ಬೆಳವಾಡಿ ಇಬ್ಬರೂ ನಟಿಸಿದ್ದರು. ಆ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿಯೇ ಪ್ರಕಾಶ್, ಕಥೆ ಹೇಳಿದ್ದರಂತೆ. ಕಥೆ ಕೇಳಿ ಇಂಪ್ರೆಸ್ ಆಗಿರುವ ರಾಗಿಣಿ ಚಿತ್ರದಲ್ಲಿ ನಟಿಸಲು ಖುಷಿಯಿಂದ ಒಪ್ಪಿಕೊಂಡಿದ್ದಾರಂತೆ.

'ಈ ಸಿನಿಮಾದ ಕಥೆ ತುಂಬ ಭಿನ್ನವಾಗಿದೆ. ಸೆನ್ಸೇಷನಲ್ ಕಥೆ ಇಟ್ಟುಕೊಂಡಿರುವ ಸಿನಿಮಾ ಇದು. ಇದು ವಿವಾದಕ್ಕೂ ಕಾರಣ ಆಗಬಹುದು' ಎಂದು ಹೇಳಿಕೊಂಡಿರುವ ರಾಗಿಣಿ, ಆ ವಿಷಯ ಯಾವುದು ಎಂಬ ಸುಳಿವನ್ನಂತೂ ಬಿಟ್ಟುಕೊಟ್ಟಿಲ್ಲ. ಈ ಚಿತ್ರದಲ್ಲಿ ಅವರು ಶ್ರೀಮಂತ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ. ಮುಂದಿನ ವರ್ಷ ಮೇ ತಿಂಗಳಲ್ಲಿ ಈ ಚಿತ್ರ ಸೆಟ್ಟೇರುವ ಸಾಧ್ಯತೆ ಇದೆ. ■

